ಫ್ರೀಡಂ ನ್ಯೂಸ್

# ರಾಜ್ಯದ ನೀರಾವರಿ ಯೋಜನೆಗಳ ಕಗ್ಗಂಟು

## ಮಾರ್ಚ್ 17 ರಂದು ದೆಹಲಿಯಲ್ಲಿ ಸಂಸದರ ಮಹತ್ವದ ಸಭೆ

**ಬೆಂಗಳೂರು:** ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳು ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ರಾಜ್ಯ ಸರ್ಕಾರ ಈಗ ನಿರ್ಣಾಯಕ ಹೆಜ್ಜೆ ಇರಿಸಿದೆ. ಮಾರ್ಚ್ 17 ರಂದು ದೆಹಲಿಯಲ್ಲಿ ರಾಜ್ಯದ ಎಲ್ಲಾ ಪಕ್ಷಗಳ ಸಂಸದರ ಬೃಹತ್ ಸಭೆಯನ್ನು ಕರೆಯಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಸಭೆಯ ನೇತೃತ್ವ ವಹಿಸಲಿದ್ದಾರೆ. ಪ್ರಮುಖವಾಗಿ ಮಹದಾಯಿ, ಮೇಕೆದಾಟು, ಎತ್ತಿನಹೊಳೆ, ಅಪ್ಪರ್ ಭದ್ರಾ, ಮತ್ತು ಯುಕೆಪಿ-3 ನಂತಹ ಬೃಹತ್ ಯೋಜನೆಗಳು ತಾಂತ್ರಿಕ ಕಾರಣಗಳಿಂದ ಅಥವಾ ಅಂತರಾಜ್ಯ ವಿವಾದಗಳಿಂದಾಗಿ ಸ್ಥಗಿತಗೊಂಡಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹಿತದೃಷ್ಟಿಯಿಂದ ಎಲ್ಲಾ ಪಕ್ಷದ ಸಂಸದರು ಒಗ್ಗೂಡಿ ಕೇಂದ್ರದ ಮೇಲೆ ಒತ್ತಡ ಹೇರಬೇಕೆಂದು ಮನವಿ ಮಾಡಲು ಸರ್ಕಾರ ಮುಂದಾಗಿದೆ.

ಈ ಕೆಲವು ಯೋಜನೆಗಳು ಪ್ರಸ್ತುತ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಬೇಕಿದ್ದರೆ, ಇನ್ನು ಕೆಲವು ಯೋಜನೆಗಳಿಗೆ ಕೇಂದ್ರ ಸರ್ಕಾರದ ನೇರ ಮಧ್ಯಪ್ರವೇಶದ ಅಗತ್ಯವಿದೆ. ಅಂತರಾಜ್ಯಗಳ ನಡುವಿನ ಜಲ ವಿವಾದಗಳನ್ನು ಮಾತುಕತೆಯ ಮೂಲಕ ಬಗೆಹರಿಸಲು ಕೇಂದ್ರ ಸರ್ಕಾರಕ್ಕೆ ಶಕ್ತಿಯಿದೆ. ಆದ್ದರಿಂದ, ಈ ವಿಷಯದಲ್ಲಿ ಕೇಂದ್ರದ ಗಮನ ಸೆಳೆಯಲು ರಾಜ್ಯದ ಸಂಸದರನ್ನು ಬಳಸಿಕೊಳ್ಳುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಸಂಸತ್ತಿನಲ್ಲಿ ರಾಜ್ಯದ ಧ್ವನಿ ಬಲವಾಗಿ ಕೇಳಿಸುವಂತೆ ಮಾಡಿ, ಬಾಕಿ ಇರುವ ಯೋಜನೆಗಳಿಗೆ ಶೀಘ್ರವಾಗಿ ಪರವಾನಗಿ ಪಡೆಯುವುದು ಈ ಸಭೆಯ ಪ್ರಮುಖ ಕಾರ್ಯಸೂಚಿಯಾಗಿದೆ.

ಮತ್ತೊಂದೆಡೆ, ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರದಿಂದ ಬರಬೇಕಾದ ಅನುದಾನದ ಕುರಿತೂ ಸಭೆಯಲ್ಲಿ ಚರ್ಚೆಯಾಗಲಿದೆ. ಈಗಾಗಲೇ ಕೇಂದ್ರ ಬಜೆಟ್‌ನಲ್ಲಿ ಘೋಷಣೆಯಾಗಿರುವ ಅನುದಾನಗಳು ಇನ್ನೂ ರಾಜ್ಯಕ್ಕೆ ತಲುಪಿಲ್ಲ. ಇದರಿಂದಾಗಿ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿವೆ. ಘೋಷಿತ ಅನುದಾನವನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ಒತ್ತಾಯಿಸಲು ಸಂಸದರಿಗೆ ಈ ಸಭೆಯಲ್ಲಿ ಸೂಚನೆ ನೀಡಲಾಗುತ್ತದೆ. ರಾಜ್ಯದ ರೈತರ ಹಿತ ಕಾಯಲು ಮತ್ತು ಬರಗಾಲದಂತಹ ಪರಿಸ್ಥಿತಿ ಎದುರಿಸಲು ಈ ಯೋಜನೆಗಳು ಅತಿ ಅಗತ್ಯವಾಗಿದ್ದು, ಮಾರ್ಚ್ 17 ರ ಸಭೆಯು ರಾಜ್ಯದ ನೀರಾವರಿ ಇತಿಹಾಸದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಲಿದೆ ಎಂದು ನಿರೀಕ್ಷಿಸಲಾಗಿದೆ.





EDITORIAL




# ಡಿಕೆ ಗಡ್ಡಕ್ಕೆ ಕತ್ತರಿ ಯಾವಾಗ..?

## ಸಿದ್ದು ಏಟಿಗೆ ಪೊಲಿಟಿಕಲ್ ಬ್ಯುಸಿನೆಮನ್ ಕಂಗಾಲು..!



ಸಿದ್ದರಾಮಯ್ಯ – ಒಂದು ಬ್ರಾಂಡ್!ಸ್ವಾಭಿಮಾನ, ಗರ್ವ, ಮನುಷ್ಯತ್ವದ ಪ್ರತೀಕ. ದೈತ್ಯ ಎದುರಾಳಿಗಳಿಗೂ ಸೆಡ್ಡುಹೊಡೆಯುವ ವ್ಯಕ್ತಿತ್ವ. ಕುರುಬ ಜಾತಿಯಲ್ಲಿ ಹುಟ್ಟಿದರೂ ಜಾತಿಯ ಹಂಗಿಲ್ಲದ ದೊಡ್ಡತನ. ಕುಟುಂಬ ರಾಜಕಾರಣದ ಪರಮ ವೈರಿ. ಕಳೆದ ಬಾರಿ ಸಿಎಂ ಆದಾಗ ಇದೇ ಅಭಿಪ್ರಾಯ ಎಲ್ಲರದ್ದೂ ಇತ್ತು.

ಆದರೆ ಎರಡನೇ ಬಾರಿ ಗದ್ದುಗೆ ಏರಿದ ನಂತರ ಚಹರೆ ಬದಲಾಯಿತು. ಸ್ವಜಾತಿ ಟೀಂ ರೆಡಿಯಾಯಿತು. ಕೆ ಬ್ರಾಂಡ್ ಅಧಿಕಾರಿಗಳಿಗೆ ಹುದ್ದೆಗಳು. ಆಡಳಿತದಲ್ಲಿ ಕಂಟ್ರೋಲ್ ತಪ್ಪಿತು. ಗ್ಯಾರಂಟಿ ಪರ ನಿಂತು ಬಜೆಟ್ಗಳನ್ನು ಜನಪರಗೊಳಿಸಲು ಹೆಣಗಾಟ.

ಕಾಂಗ್ರೆಸ್ ಗೆದ್ದಾಗ ದೆಹಲಿಯಲ್ಲಿ ಸರ್ಕಸ್ ನಡೆದಿತ್ತು. ಡಿಕೆ ಪಟ್ಟು ಬಿಡದೆ ಸುಸ್ತುಮಾಡಿದರು. ಸಿದ್ದು ಮುಖ ಕಳಾಹೀನವಾಗಿತ್ತು. ಹಳೆಯ ಶಿಷ್ಯರು, ಜನತಾ ಪರಿವಾರದ ನಾಯಕರು ಕೈ ಹಿಡಿದರು. ಕಡೆಗೆ ಸಿದ್ದು ಎರಡನೇ ಅವಧಿಗೆ ಸಿಎಂ ಆದರು. ಆಗಲೇ ಡಿಕೆಗೆ ಅರ್ಧ ಅವಧಿಗೆ ಕುರ್ಚಿ ಬಿಡುವುದಾಗಿ ಮಾತು ಕೊಟ್ಟಿದ್ದಾರೆ ಎಂದು ಹೇಳಲಾಗಿತ್ತು.

ಎರಡೂವರೆ ವರ್ಷ ಮುಗಿಯುತ್ತಿದ್ದಂತೆ ಸಿದ್ದು ಸುತ್ತ ವಚನ ಭ್ರಷ್ಟತೆಯ ಕಾರ್ಮೋಡ. ಅಧಿಕಾರ ವ್ಯಾಮೋಹ, ಪುತ್ರ ವ್ಯಾಮೋಹದ ಕಳಂಕ. ಮುಂದಿನ ಬಜೆಟ್ ನಾನೇ ಮಂಡಿಸುತ್ತೇನೆ ಎಂದು ಹೇಳಿ, ಡಿಕೆಗೆ ಅವಕಾಶ ಇಲ್ಲ ಎಂಬ ಸಂದೇಶ ಕಳುಹಿಸಿದ್ದಾರೆ ಸಿಎಂ.

ಡಿಕೆ ಶಿವಕುಮಾರ್ ಪಕ್ಷಕ್ಕಾಗಿ ಸವೆದವರು, ಹೈಕಮಾಂಡ್ ಗಾಗಿ ಜೈಲು ಸೇರಿದವರು, ಒಕ್ಕಲಿಗರನ್ನು ಸೆಳೆದವರು. ಆದರೆ ರಾಜ್ಯಭಾರದ ಕನಸು ನನಸಾಗುತ್ತಿಲ್ಲ. ಸಿದ್ದು ಪಟಾಲಂನ ಜಾರ್ಜ್, ದೇಶಪಾಂಡೆ, ಎಂಬಿ ಪಾಟೀಲ್, ಸತೀಶ ಜಾರಕಿಹೊಳಿ ಮುಂತಾದವರು ಬಿಡುತ್ತಿಲ್ಲ. ಹೈಕಮಾಂಡ್ ಬಣದ ಎಚ್ ಕೆ ಪಾಟೀಲ್, ಗುಂಡೂರಾವ್, ಹಿರಿ ಖರ್ಗೆ, ಖಂಡ್ರೆಗಳಿಗೆ ಡಿಕೆ ಅಸ್ಪೃಶ್ಯ.

ಇನ್ನು ಪರಮೇಶ್ವರ್, ಮುನಿಯಪ್ಪ ದಲಿತ ಸಿಎಂ ಅಸ್ತ್ರ ಬೀಸುತ್ತ ಸೆಟೆದು ನಿಂತಿದ್ದಾರೆ.

ರಮೇಶ್ ಜಾರಕಿಹೊಳಿ ಸಿಡಿ ಕೇಸ್ ಹಿನ್ನೆಲೆಯಲ್ಲಿ ಡಿಕೆ ಶಾಸಕರ ಸಿಡಿ ಮಾಡುತ್ತಾರೆ ಎಂಬ ಭಯ ಹರಡಿಸಲಾಗಿದೆ. ಅತಿ ಕರಪ್ಟ್ ಎಂಬ ಪ್ರಪೋಗಾಂಡ ಮಾಡಾಗಿದೆ. ಆದರೆ ಹೆಚ್ಚು ಹಣ ಮಾಡುವ ಮಂತ್ರಿಗಳು ಬೇರೆಯೇ ಇದ್ದಾರೆ. ಈ ಮಧ್ಯೆ ಸಿದ್ದು ಹೊಸ ವರಸೆಯಿಂದ ಡಿಕೆ ಕುಸಿದಿದ್ದಾರೆ.

ಮುಂದಿನ ಚುನಾವಣೆಗೆ ನಿನ್ನ ಸಾರಥ್ಯ, ನಿನ್ನನ್ನು ಗೆಲ್ಲಿಸುವ ಹೊಣೆ ನನ್ನದು ಎಂದು ಹೇಳಿ ಡಿಕೆ ಕಿವಿಗೆ ಭವಿಷ್ಯದ ಗುಲಾಬಿ ಇಡಲಾಗುತ್ತಿದೆ.

ಅಹಿಂದ + ಒಕ್ಕಲಿಗ ಸೂತ್ರದಡಿ ಗೆಲ್ತೇವೆ ನೆಕ್ಸ್ಟ್ ನೀನೆ ಸಿಎಂ ಎನ್ನಲಾಗ್ತಿದೆ. ಈ ಸೂತ್ರದಡಿ ಕೈ ಪಡೆ ಮತ್ತೆ ಗೆಲ್ಲಬಹುದಾ..? ಕಳೆದ ಬಾರಿ ಮೀಸಲಾತಿಗೆ ಕೈ ಹಾಕಿ ಬೊಮ್ಮಾಯಿ ಸೋತಿದ್ದರು. ಇದರಿಂದ ಪಾಠ ಕಲಿತ ಮೋದಿ ಶಾ ತಂತ್ರ ಏನಾಗಬಹುದು..? ಒಟ್ಟಿನಲ್ಲಿ ಕಾಂಗ್ರೆಸ್ ಹಳೇ ಹುಲಿಗಳ ಆಟದ ಮಧ್ಯೆ ಡಿಕೆಯ ಗಡ್ಡಕ್ಕೆ ಕತ್ತರಿ ಬೀಳಲು ಎಷ್ಟು ಕಾಲ ಕಾಯಬೇಕೋ..?

# THE SIDDU BRAND V/S THE DK FACTOR!

Siddaramaiah – a brand! Symbol of self-respect, pride, and humanity. A personality that stands up even to giant opponents. Born into the Kuruba community, yet free from caste hang-ups – true greatness. The ultimate enemy of family politics. When he became CM last time, this was everyone's opinion.But after ascending the throne for the second time, the face changed. A caste-based team got ready. "K" brand officers got key posts. Control over administration slipped. Struggling to make budgets people-friendly under the guise of guarantees.


When Congress won, there was a circus in Delhi. DK kept pushing relentlessly. Siddhu's face looked drained. Old disciples and Janata Parivar leaders held his hand. Finally, Siddhu became CM for the second term. At that very moment, it was said he had promised to hand over the chair to DK after half the term.As two-and-a-half years neared completion, clouds of broken promises gathered around Siddhu. Allegations of power obsession and son obsession. By declaring "I will present the next budget myself," the CM sent a clear message: no chance for DK.DK Shivakumar – the one who sacrificed for the party, went to jail for the high command, pulled in the Vokkaliga community. Yet his dream of ruling the state remains unfulfilled. Siddhu's battalion – George, Deshpande, MB Patil, Satish Jarkiholi and others – won't let go. To high command faction leaders like Hariprasad, HK Patil, Gundu Rao, Kharge, Khandre – DK is untouchable.Meanwhile, Parameshwara and Muniyappa are standing firm, waving the Dalit CM card.


In the backdrop of Ramesh Jarkiholi's CD case, fear is being spread that DK will make CDs of MLAs. Propaganda labels him "most corrupt." But there are other ministers making far more money. Amid all this, Siddhu's new tactics have weakened DK.Whispers in DK's ear: "For the next election, your leadership – my responsibility to get you elected."

Under the AHINDA + Vokkaliga formula, we'll win again – next time you're the CM. Can Congress repeat the win with this formula..? Last time, meddling with reservation cost Bommai the election. What new tactic might Modi-Shah, having learned from that, deploy..? In short, amid Congress's old tigers' games, how long must we wait for the scissors to finally fall on DK's beard..?

# ಕರ್ನಾಟಕಕ್ಕೆ 'ನೆಟ್‌ವರ್ಕ್' ಶಾಕ್

## ರಾಜ್ಯದ 470 ಹಳ್ಳಿಗಳಲ್ಲಿ ಇಂದಿಗೂ ಮೊಬೈಲ್ ಸಂಪರ್ಕವಿಲ್ಲ!





**ಬೆಂಗಳೂರು:** ದೇಶದ ಸಿಲಿಕಾನ್ ಸಿಟಿ, ಸ್ಟಾರ್ಟ್ ಅಪ್ ಹಬ್ ಮತ್ತು ವಿಜ್ಞಾನ ನಗರಿ ಎಂಬ ಹೆಗ್ಗಳಿಕೆ ಪಾತ್ರವಾಗಿರುವ ಕರ್ನಾಟಕವು ತಂತ್ರಜ್ಞಾನ ಅಳವಡಿಕೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಆದರೆ, ಈ ಆಧುನಿಕತೆಯ ನಡುವೆಯೇ ಒಂದು ಕಹಿ ಸತ್ಯ ಹೊರಬಿದ್ದಿದೆ. ರಾಜ್ಯದ ಸುಮಾರು 470 ಹಳ್ಳಿಗಳಲ್ಲಿ ಇಂದಿಗೂ ಮೊಬೈಲ್ ನೆಟ್‌ವರ್ಕ್ ಇಲ್ಲದಿರುವುದು ಬೆಳಕಿಗೆ ಬಂದಿದೆ. ದೇಶವು 5G ಯುಗಕ್ಕೆ ಕಾಲಿಟ್ಟಿದ್ದರೂ, ಪ್ರಗತಿಶೀಲ ರಾಜ್ಯವೆನಿಸಿಕೊಂಡ ಕರ್ನಾಟಕದ ನೂರಾರು ಹಳ್ಳಿಗಳು ಇಂದಿಗೂ ಡಿಜಿಟಲ್ ಸಂಪರ್ಕದಿಂದ ವಂಚಿತವಾಗಿವೆ ಎಂಬ ಅಂಶವು ಲೋಕಸಭೆಯಲ್ಲಿ ದೂರಸಂಪರ್ಕ ಇಲಾಖೆ ನೀಡಿದ ಮಾಹಿತಿಯಿಂದ ದೃಢಪಟ್ಟಿದೆ.

ದಕ್ಷಿಣ ಭಾರತದ ರಾಜ್ಯಗಳ ಪೈಕಿ ಮೊಬೈಲ್ ಸಂಪರ್ಕವಿಲ್ಲದ ಗ್ರಾಮಗಳ ಪಟ್ಟಿಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂಬುದು ಆತಂಕಕಾರಿ ವಿಷಯ. ಜನವರಿ 31, 2026 ರವರೆಗಿನ ಅಂಕಿ-ಅಂಶಗಳ ಪ್ರಕಾರ, ದೇಶಾದ್ಯಂತ 8,985 ಹಳ್ಳಿಗಳು ಮೊಬೈಲ್ ನೆಟ್‌ವರ್ಕ್ ಹೊಂದಿಲ್ಲದ "ಬ್ಲಾಕ್ ಸ್ಪಾಟ್" ಪ್ರದೇಶಗಳಾಗಿವೆ. ಕರ್ನಾಟಕದಲ್ಲಿ ಅತಿ ಹೆಚ್ಚು ಬಾಧಿತವಾಗಿರುವುದು ಉತ್ತರ ಕನ್ನಡ ಜಿಲ್ಲೆ. ಇಲ್ಲಿನ 189 ಗ್ರಾಮಗಳಲ್ಲಿ ನೆಟ್‌ವರ್ಕ್ ಸಂಪರ್ಕವೇ ಇಲ್ಲ. ನಂತರದ ಸ್ಥಾನಗಳಲ್ಲಿ ಶಿವಮೊಗ್ಗ (75), ಚಿಕ್ಕಮಗಳೂರು (40), ಚಾಮರಾಜನಗರ (25), ಬೆಳಗಾವಿ (19) ಮತ್ತು ಕಲಬುರಗಿ (18) ಜಿಲ್ಲೆಗಳು ಇವೆ. ಗುಡ್ಡಗಾಡು ಪ್ರದೇಶ, ದಟ್ಟ ಅರಣ್ಯ ಮತ್ತು ಭೌಗೋಳಿಕ ಸವಾಲುಗಳು ಈ ಗ್ರಾಮಗಳಿಗೆ ತಂತ್ರಜ್ಞಾನ ತಲುಪಲು ಅಡ್ಡಿಯಾಗಿವೆ ಎಂದು ವಿಶ್ಲೇಷಿಸಲಾಗಿದೆ.

ನೆರೆಯ ರಾಜ್ಯಗಳ ಪರಿಸ್ಥಿತಿಯನ್ನು ಗಮನಿಸಿದರೆ, ಕೇರಳದ ಎಲ್ಲಾ ಗ್ರಾಮಗಳು ಮೊಬೈಲ್ ಸಂಪರ್ಕವನ್ನು ಹೊಂದಿವೆ. ತಮಿಳುನಾಡಿನಲ್ಲಿ ಕೇವಲ ಮೂರು ಗ್ರಾಮಗಳಲ್ಲಿ ಮಾತ್ರ ನೆಟ್‌ವರ್ಕ್ ಇಲ್ಲ. ದೇಶದ ಮಟ್ಟದಲ್ಲಿ ಒಡಿಶಾ (1,237), ಅರುಣಾಚಲ ಪ್ರದೇಶ (1,185) ಮತ್ತು ಮಧ್ಯಪ್ರದೇಶ (960) ರಾಜ್ಯಗಳು ಅತಿ ಹೆಚ್ಚು ನೆಟ್‌ವರ್ಕ್ ರಹಿತ ಹಳ್ಳಿಗಳನ್ನು ಹೊಂದಿವೆ. ಈ ಸಮಸ್ಯೆಯನ್ನು ನೀಗಿಸಲು ಕೇಂದ್ರ ಸರ್ಕಾರವು 'ಭಾರತ್ ನೆಟ್' (BharatNet) ಯೋಜನೆಯಡಿ ಬ್ರಾಡ್‌ಬ್ಯಾಂಡ್ ಸಂಪರ್ಕ ಒದಗಿಸಲು ಮುಂದಾಗಿದೆ. ಈಗಾಗಲೇ ದೇಶಾದ್ಯಂತ 4G ಸೇವೆಯನ್ನು ವಿಸ್ತರಿಸಲು 23,994 ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಈ ಎಲ್ಲಾ ಹಳ್ಳಿಗಳಿಗೆ ಡಿಜಿಟಲ್ ಶಕ್ತಿ ತುಂಬುವ ಭರವಸೆಯನ್ನು ಸರ್ಕಾರ ನೀಡಿದೆ.

## ಸಿಲ್ಕ್ ಬೋರ್ಡ್ ಟ್ರಾಫಿಕ್‌ಗೆ ಮುಕ್ತಿ: ಡಬಲ್ ಡೆಕ್ಕರ್ ಫ್ಲೈಓವರ್ ಲೋಕಾರ್ಪಣೆಗೆ ಸಿದ್ಧ!



**ಬೆಂಗಳೂರು:** ಟ್ರಾಫಿಕ್ ನರಕವೆಂದೇ ಹೆಸರಾದ ಸಿಲ್ಕ್ ಬೋರ್ಡ್ ಜಂಕ್ಷನ್ ಸವಾರರಿಗೆ ಬಿಎಂಆರ್‌ಸಿಎಲ್ (BMRCL) ಸಿಹಿ ಸುದ್ದಿ ನೀಡಿದೆ. ಬಹುನಿರೀಕ್ಷಿತ 3.36 ಕಿ.ಮೀ. ಉದ್ದದ ಡಬಲ್ ಡೆಕ್ಕರ್ ಫ್ಲೈಓವರ್‌ನ ಎರಡನೇ ಭಾಗ ಮಾರ್ಚ್ ಅಂತ್ಯ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಸಂಚಾರಕ್ಕೆ ಮುಕ್ತವಾಗಲಿದೆ.

ಈ ಮೇಲ್ಸೇತುವೆ ಬಳಕೆಗೆ ಲಭ್ಯವಾದರೆ ಸಿಲ್ಕ್ ಬೋರ್ಡ್ ಮತ್ತು ಎಲೆಕ್ಟ್ರಾನಿಕ್ ಸಿಟಿ ನಡುವಿನ ಪ್ರಯಾಣದ ಸಮಯ ಗಣನೀಯವಾಗಿ ತಗ್ಗಲಿದೆ. ಗಂಟೆಗಟ್ಟಲೆ ಟ್ರಾಫಿಕ್‌ನಲ್ಲಿ ಸಿಲುಕುತ್ತಿದ್ದ ವಾಹನ ಸವಾರರು ಇನ್ನು ಮುಂದೆ ಸರಾಗವಾಗಿ ಸಂಚರಿಸಬಹುದಾಗಿದೆ. ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಶೀಘ್ರವೇ ಲೋಕಾರ್ಪಣೆಗೊಳ್ಳಲಿರುವ ಈ ಫ್ಲೈಓವರ್ ಐಟಿ ಹಬ್‌ನ ಸಂಚಾರ ದಟ್ಟಣೆಗೆ ದೊಡ್ಡ ಮದ್ದು ನೀಡಲಿದೆ ಎಂದು ನಿರೀಕ್ಷಿಸಲಾಗಿದೆ.

# ಗ್ಯಾಸ್ ಏಜೆನ್ಸಿಗಳ ಅಕ್ರಮ ದಂಧೆ: ಕಾಳಸಂತೆಯಲ್ಲಿ ₹3,000ಕ್ಕೆ ಮಾರಾಟ!



**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಅಡುಗೆ ಅನಿಲ (LPG) ಸಿಲಿಂಡರ್ ಪೂರೈಕೆ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಗ್ಯಾಸ್ ಏಜೆನ್ಸಿಗಳು ಗ್ರಾಹಕರ ಕಣ್ಣಿಗೆ ಮಣ್ಣೆರಚಿ ಭರ್ಜರಿ ದಂಧೆ ನಡೆಸುತ್ತಿವೆ. ವಾಣಿಜ್ಯ ಸಿಲಿಂಡರ್‌ಗಳ ಕೊರತೆಯ ಬೆನ್ನಲ್ಲೇ ದೇಶೀಯ ಸಿಲಿಂಡರ್‌ಗಳಿಗೂ ಹಾಹಾಕಾರ ಶುರುವಾಗಿದ್ದು, ಸಾಮಾನ್ಯ ಜನರು ಅಡುಗೆ ಮಾಡಲು ಸಂಕಷ್ಟ ಪಡುವಂತಾಗಿದೆ. ಏಜೆನ್ಸಿಗಳು ಗ್ರಾಹಕರ ಹೆಸರಿನಲ್ಲಿ ತಾವೇ ಸಿಲಿಂಡರ್ ಬುಕ್ ಮಾಡಿ, ಅವುಗಳನ್ನು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ಮೂರು ಪಟ್ಟು ಹೆಚ್ಚಿನ ಬೆಲೆಗೆ ಎಂದರೆ ಬರೋಬ್ಬರಿ 3,000 ರೂಪಾಯಿಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಗಂಭೀರ ಆರೋಪ ಕೇಳಿಬಂದಿದೆ.

ನಗರದ ಹಲವು ಭಾಗಗಳಲ್ಲಿ ಗ್ರಾಹಕರು ಸಿಲಿಂಡರ್ ಬುಕ್ ಮಾಡಲು ಅಪ್ಲಿಕೇಶನ್ ಲಾಗಿನ್ ಆದಾಗ ಅಚ್ಚರಿಯ ಸಂದೇಶಗಳು ಲಭಿಸುತ್ತಿವೆ. "ನೀವು ಇತ್ತೀಚೆಗಷ್ಟೇ ಸಿಲಿಂಡರ್ ಖರೀದಿಸಿದ್ದೀರಿ, ಸದ್ಯಕ್ಕೆ ಬುಕಿಂಗ್ ಮಾಡಲು ಸಾಧ್ಯವಿಲ್ಲ" ಎಂಬ ಸುಳ್ಳು ಸಂದೇಶಗಳನ್ನು ನೋಡಿ ಸಾರ್ವಜನಿಕರು ದಂಗಾಗಿದ್ದಾರೆ. ವೈಟ್‌ಫೀಲ್ಡ್‌ನ ಅನುಭಾ ಗುಪ್ತಾ ಎಂಬುವವರು ಎಚ್‌ಪಿ ಗ್ಯಾಸ್ ಏಜೆನ್ಸಿಗೆ ಸತತವಾಗಿ ಕರೆ ಮಾಡಿದರೂ ಪ್ರಯೋಜನವಾಗಿಲ್ಲ, ಬದಲಿಗೆ ಬುಕಿಂಗ್ ನಿರ್ಬಂಧಿಸಿರುವ ಸಂದೇಶ ಬಂದಿದೆ. ಇಂತಹ ತಾಂತ್ರಿಕ ಅಡೆತಡೆಗಳನ್ನು ಸೃಷ್ಟಿಸುವ ಮೂಲಕ ಏಜೆನ್ಸಿಗಳು ದಾಸ್ತಾನು ಅಡಗಿಸಿಟ್ಟು ಅಕ್ರಮ ವ್ಯವಹಾರ ನಡೆಸುತ್ತಿವೆ ಎಂಬ ಆಕ್ರೋಶ ವ್ಯಕ್ತವಾಗಿದೆ.

ಈ ದಂಧೆಯ ಇನ್ನೊಂದು ಕರಾಳ ಮುಖವೆಂದರೆ ಗ್ರಾಹಕರ ಅರಿವಿಗೆ ಬಾರದೆ ಅವರ ಹೆಸರಿನಲ್ಲೇ ಸಿಲಿಂಡರ್ ಬುಕ್ ಆಗುತ್ತಿರುವುದು. ವ್ಯಕ್ತಿಯೊಬ್ಬರು ಅಪ್ಲಿಕೇಶನ್ ಇತಿಹಾಸ ಪರಿಶೀಲಿಸಿದಾಗ, ತಾವು ಪಡೆಯದಿದ್ದರೂ ಅವರ ಹೆಸರಿನಲ್ಲಿ ಕಳೆದ ಎರಡು ವಾರಗಳಲ್ಲಿ ಬರೋಬ್ಬರಿ 7 ಸಿಲಿಂಡರ್‌ಗಳು ಬುಕ್ ಆಗಿರುವುದು ಪತ್ತೆಯಾಗಿದೆ. ಸಾಮಾನ್ಯ ಗ್ರಾಹಕರಿಗೆ ಸಿಗದ ಸಿಲಿಂಡರ್ ಅಕ್ರಮವಾಗಿ ಹೋಟೆಲ್ ಮಾಲೀಕರಿಗೆ ತಲುಪುತ್ತಿರುವುದು ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ. ಕೂಡಲೇ ಸಂಬಂಧಪಟ್ಟ ಇಲಾಖೆಗಳು ಈ ದಂಧೆಯ ಮೇಲೆ ದಾಳಿ ನಡೆಸಿ, ವಂಚಕ ಏಜೆನ್ಸಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಬೆಂಗಳೂರಿಗರು ಒತ್ತಾಯಿಸುತ್ತಿದ್ದಾರೆ.

# ಕೀರ್ತಿ ಹಾರ್ಮನಿ ಅಪಾರ್ಟ್‌ಮೆಂಟ್‌ನಿಂದ ಒತ್ತುವರಿಯಾಗಿದ್ದ ರಸ್ತೆ ವಶ



**ಬೆಂಗಳೂರು:** ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದ ಕೀರ್ತಿ ಹಾರ್ಮನಿ ಅಪಾರ್ಟ್‌ಮೆಂಟ್ ವಿರುದ್ಧ ಬಿಬಿಎಂಪಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಪಾಲಿಕೆಯ ಪೂರ್ವ ವಲಯದ ಜಂಟಿ ಆಯುಕ್ತರಾದ ಡಾ. ಬಿ. ಸುಧಾ ಅವರ ನೇತೃತ್ವದ ತಂಡವು, ಅಕ್ರಮವಾಗಿ ವಶಪಡಿಸಿಕೊಳ್ಳಲಾಗಿದ್ದ ರಸ್ತೆಯನ್ನು ತೆರವುಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಿದೆ. ಕಲ್ಕೆರೆ ಮತ್ತು ರಾಮಮೂರ್ತಿ ನಗರ ವಿಭಾಗಕ್ಕೆ ಸೇರಿದ ಈ ಪ್ರದೇಶದಲ್ಲಿ ಸುಮಾರು 1080 ಚದರ ಮೀಟರ್ ವಿಸ್ತೀರ್ಣದ ರಸ್ತೆ ಜಾಗವನ್ನು ಅಪಾರ್ಟ್‌ಮೆಂಟ್ ಮಂಡಳಿಯು ಸ್ವಂತಕ್ಕೆ ಬಳಸಿಕೊಳ್ಳುತ್ತಿತ್ತು.

ಈ ಕುರಿತು ಸ್ಥಳೀಯರಿಂದ ಬಂದ ದೂರುಗಳ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅವರು, ಕಾನೂನುಬಾಹಿರವಾಗಿ ರಸ್ತೆ ಬಂದ್ ಮಾಡಿರುವುದನ್ನು ಖಚಿತಪಡಿಸಿಕೊಂಡರು. "ಕೀರ್ತಿ ಹಾರ್ಮನಿ ಅಪಾರ್ಟ್‌ಮೆಂಟ್‌ನವರು ನಕ್ಷೆ ಮಂಜೂರಾತಿ ಸಮಯದಲ್ಲಿ ಈ ಜಾಗವನ್ನು ಸಾರ್ವಜನಿಕ ರಸ್ತೆ ಎಂದು ನೋಂದಾಯಿಸಿಕೊಟ್ಟಿದ್ದರು. ಆದರೆ, ನಂತರದ ದಿನಗಳಲ್ಲಿ ಅದನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದರು. ಈಗ ಆ ಜಾಗವನ್ನು ಪಾಲಿಕೆ ತನ್ನ ಸುಪರ್ದಿಗೆ ತೆಗೆದುಕೊಂಡಿದೆ," ಎಂದು ಅವರು ಸ್ಪಷ್ಟಪಡಿಸಿದರು.

ಕಾರ್ಯಾಚರಣೆಯ ನಂತರ ಮಾತನಾಡಿದ ಜಂಟಿ ಆಯುಕ್ತರಾದ ಡಾ. ಸುಧಾ ಅವರು, ಸಾರ್ವಜನಿಕರ ಹಿತದೃಷ್ಟಿಯಿಂದ ಕಾಯ್ದಿರಿಸಿದ ಜಾಗವನ್ನು ಯಾರೇ ಒತ್ತುವರಿ ಮಾಡಿದರೂ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.